I agree we have to call for objections. We have asked for some clarifications with regard to certain other set up of engineers of SDOs' level who are from ex-Hydrabad and ex-Mysore areas. We will see that we get the clarifications as quickly as possible In the meantime, apprehensions have been expressed that we might carry on with the 1968 list for promotions and other things. I shall certainly look into it. I would like to say one thing at this stage. Injustice should not be allowed to be perpetrated and Government will certainly try to do what is legally possible. Regarding the promotions, I will get the whole thing examined. Unless I am satisfied, I will not allow much things to happen. Secondly, with regard to A Es. to be promoted from the Scheduled Castes' quota, the hon. Member says that it is not being done. I shall certainly look into that aspect as well. At this stage, I don't think I need say anything more. What the members have stated will be borned in mind and we shall look into all these things before we proceed with the promotions.

(iii) re : Assault one Sri Ramaiah of Jigani village

ಶ್ರೀ ಪಿ.ಎನ್. ರೆಡ್ಡಿ(ಮಾಲೂರು) — ಮಾನ್ಯ ಅಧ್ಯಕ್ಷರೇ, ನನ್ನ ಪಕ್ಷದ ಅನೇಕಲ್ ತಾಲ್ಲೂಕಿನ ಜಿಗಣಿಹಳ್ಳಿಯಲ್ಲಿ ನಡೆದ ಘಟನೆಯನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಅಲ್ಲಿನ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವ ಹೊಂದಿರುವ ಶ್ರೀಮತಿ ಇಂದಿರಾಗಾಂಧಿಯವರಿಗೆ ಮತ್ತು ಉಪ ನಾಯಕತ್ವ ಹೊಂದಿರುವ ಶ್ರೀ ದೇವರಾಜ ಅರಸ್ ಅವರಿಗೆ ಬೆಂಬಲ ನೀಡಿದ ಹರಿಜನ ಬಂಧುಗಳಾದ ಶ್ರೀ ಚಿಕ್ಕವೆಂಕಟಪ್ಪ ಮತ್ತು ಅತನ ಸೋದರ ರಾಮಯ್ಯ ಹಾಗೂ ಅವರ ಕುಟುಂಬದವರ ಮೇಲೆ, ವಿರೋಧಪಕ್ಷದವರ ವೈಮನಸ್ಯವಿತ್ತು. ನನಗೆ ಬಂದಿರುವ ಸುದ್ದಿ ಸಂಗ್ರಹದ ಪ್ರಕಾರ ವಿರೋಧ ಪಕ್ಷದವರೆಂದರೆ ಜನತಾ ಪಕ್ಷದ ಅನುಯಾಯಿಗಳು ಹಾಗೂ ಕಾರ್ಯಕರ್ತರಾದ ಶ್ರೀ ಕೆ. ಮರಿಯಪ್ಪ ಶೆಟ್ಟಿ, ಉಮೇಶ, ಪುಟ್ಟಪ್ಪನವರ ಮಗ ಅಮರನಾಥ, ಮಾದಪ್ಪ ಶೆಟ್ಟಿ ಮತ್ತು ಚಿನ್ನಪ್ಪನವರ ಮಗ ರಾಜು. ಈ ಸುದ್ದಿ ಸಂಗ್ರಹವನ್ನು ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಮತ್ತು ನಮ್ಮ ನಾಯಕರಿಗೂ ಅಧ್ಯಕ್ಷರ ಮೂಲಕ ಕಳುಹಿಸಿಕೊಡುತ್ತೇನೆ. ಈ ಹರಿಜನ ಬಂಧುಗಳು ತಾಲ್ಲೂಕು ಮಂಡಲಿ ಚುನಾವಣೆಯಲ್ಲಿ ಜಿಗಣಿಹಳ್ಳಿ ಹೋಬಳಿಯ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಲು ಸಹಾಯಕರಾದರು. ಈ ಹರಿಜನ ಬಂಧುಗಳಾದ ಚಿಕ್ಕ ವೆಂಕಟಪ್ಪ, ರಾಮಯ್ಯ ಮತ್ತು ಅವರ ಕುಟುಂಬದವರನ್ನು ಚುನಾವಣೆಗಳ ನಂತರ ಮೇಲ್ಕಂಡ ಹಿಂಸೆಗಳಿಂದ ಅನೇಕ ರೀತಿಯಲ್ಲಿ ಬೈದು, ಹಿಂಸಾ ಕಾರ್ಯದಲ್ಲಿ ತೊಡಗಿ ಅವರನ್ನು ಮತ್ತೆ ಜನತಾ ಪಕ್ಷದ ಅನುಯಾಯಿಗಳು ಮತ್ತು ಕಾರ್ಯಕರ್ತರು ದಂಡಿಸಿದರು. ಈ ಬಗ್ಗೆ ಅವರು ದೂರು ಕೊಟ್ಟಿದ್ದಾರೆ. ಅದೇ ರೀತಿ, ಈ ಹರಿಜನ ಬಂಧುಗಳು ಪಂಚಾಯಿತಿ ಚುನಾವಣೆಯಲ್ಲೂ ಜನತಾ ಅಭ್ಯರ್ಥಿಗಳಿಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಈ ವೈಮನಸ್ಸಿನಿಂದ ದಿನಾಂಕ ೧೯ನೇ ಜುಲೈ ೧೯೭೮ ರಂದು ಸಮಾರು ಬೆಳಿಗ್ಗೆ ೧೦ ಗಂಟೆಯಲ್ಲಿ, ಚಿಕ್ಕ ವೆಂಕಟಪ್ಪ ಹಾಗೂ ಅವರ ಸೋದರ ರಾಮಯ್ಯ ಮತ್ತಿತರರು ಅವರ ಮನೆಯ ನಿವೇಶನದಲ್ಲಿ ಗುಡಿಸಲು ಕಟ್ಟುತ್ತಿದ್ದಾಗ ಜನತಾ ಪಕ್ಷದ ಅನುಯಾಯಿಗಳಾದ ಮರಿಯಪ್ಪಶೆಟ್ಟಿ, ಉಮೇಶ, ಪುಟ್ಟಪ್ಪನವರ ಮಗ ಅಮರನಾಥ, ಮಾದಪ್ಪಶೆಟ್ಟಿ ಮತ್ತು ರಾಜು— ಅವರುಗಳು ಆ ಸ್ಥಳಕ್ಕೆ ಧಾವಿಸಿ ಅವರನ್ನು ಹೀನಾಮಾನವಾಗಿ ಬೈದು.....

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಮಾತನಾಡುತ್ತಾ, ಜನತಾ ಪಕ್ಷವನ್ನು ಇಲ್ಲಿ ಎಳೆಯುತ್ತಿದ್ದಾರೆ. ಚಿಂತಾಮಣಿ ಬಾಂಬ್ ಪ್ರಕರಣವನ್ನು ಪ್ರಸ್ತಾಪ ಮಾಡಿದ ಮಾನ್ಯ ಸದಸ್ಯರೂ ಸಹ ಪಕ್ಷದ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದರು. ಆ ಬಗ್ಗೆ

ಮುಖ್ಯ ಮಂತ್ರಿಗಳ ಹೇಳಿಕೆ ಕೊಟ್ಟಮೇಲೆ ಆದು ಸತ್ಯವಲ್ಲವೆಂದು ಗೊತ್ತಾಯಿತು. ಆದುದರಿಂದ, ನಾನು ತಮ್ಮಲ್ಲಿ ಹೇಳಬಯಸುವುದೇನೆಂದರೆ, ಯಾರು ಯಾರು ಯಾವ ಯಾವ ಪಕ್ಷದವರೆಂದು ಗೊತ್ತಾಗುವವರೆಗೆ ಮಾನ್ಯ ಸದಸ್ಯರು ಯಾವ ಪಕ್ಷದ ಹೆಸರನ್ನೂ ಇಲ್ಲಿ ಎಳೆಯುವುದು ಸರಿಯಲ್ಲ. ಬೇಕಾದರೆ, ಅವರು ಘಟನೆಯನ್ನು ಹೇಳಲಿ ಮತ್ತು ಸಂಬಂಧಪಟ್ಟ ವ್ಯಕ್ತಿಗಳ ಹೆಸರುಗಳನ್ನು ಹೇಳಲಿ.

ಶ್ರೀ ಪಿ.ಎನ್. ರೆಡ್ಡಿ.— ಮಾನ್ಯ ಅಧ್ಯಕ್ಷರೇ, ನಾನು ಮೊದಲೆ ತಿಳಿಸಿದ ಹಾಗೆ, ನನಗೆ ಬಂದಿರುವ ಸುದ್ದಿ ಸಂಗ್ರಹಗಳಿಂದ ತಿಳಿಸುತ್ತಿದ್ದೇನೆ ಸಂಗ್ರಹವಿಲ್ಲದೆ ನಾನು ಮಾತನಾಡುವುದಿಲ್ಲ. ತಾವು ಜನತಾ ಪಕ್ಷದ ಅನುಯಾಯಿಗಳಿಂದು ಮುರಿಯಪ್ಪಶೆಟ್ಟರು ಕ್ಯಾಲೆಂಡರುಗಳಲ್ಲಿ ಪ್ರಚಾರ ಮಾಡಿದ್ದಾರೆ. ಆದನ್ನೂ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ನಮ್ಮ ನಾಯಕರಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಡುತ್ತೇನೆ. ದಿನಾಂಕ ೧೯ನೇ ಜುಲೈ ೧೯೭೮ರ ಬೆಳಿಗ್ಗೆ ೧೦ ಗಂಟೆಗೆ ಇವರು ಬಂದು ಈ ರೀತಿಯಾಗಿ ಬೈದರು ಹೊಲೆ ನನ್ಮಕ್ಕಳಾ.....

ಶ್ರೀ ವೈ. ರಾಮಕೃಷ್ಣ.— ಮಾನ್ಯ ಸದಸ್ಯರು ಇಷ್ಟು ದೂರ ಹೋಗಬಾರದು. ಹರಿಜನರ ಬಗ್ಗೆ ಅವರಿಗೆಷ್ಟು ಕಾತುರತೆ ಇದೆಯೋ ಅಷ್ಟೇ ಕಾತುರತೆ ನಮಗೂ ಇದೆ.

ಶ್ರೀ ಪಿ.ಎನ್. ರೆಡ್ಡಿ.—ನನಗೆ ಬಂದಿರುವ ಸುದ್ದಿ ಸಂಗ್ರಹವನ್ನು ಇಲ್ಲಿ ಹೇಳುತ್ತಿದ್ದೇನೆ. ''ಹೊಲೆ ನನ್ಮಕ್ಕಳಿಗೆ ಪಟ್ಟ ಬಂದಿದೆ, ಇಪ್ಪತ್ತು ಸಾವಿರ ಖರ್ಚಾದರೂ ಪರವಾಗಿಲ್ಲ ಇವರ ಕೊಬ್ಬನ್ನು ಅಡಗಿಸ್ತೀನಿ.....''

ಶ್ರೀ ಮಳ್ಳೂರು ಆನಂದರಾವ್.— ಮಾನ್ಯ ಸದಸ್ಯರು ಬಳಸುತ್ತಿರುವ ಪದಗಳು ಸಾಂಸದೀಕ ಪದಗಳೇ ಅಥವಾ ಅಲ್ಲವೆ?

ಶ್ರೀ ಎಂ.ವಿ. ರಾಜಶೇಖರನ್.—ಕುಂಟಲರೆಡ್ಡಿ ಯವರಿಗೂ ಮತ್ತು ಶ್ರೀ ಪಿ.ಎನ್. ರೆಡ್ಡಿಯವರಿಗೂ ಸಂಬಂಧವಿದೆ. ಆದರೆ, ಈ ಘಟನೆ ಯಾವ ಪಕ್ಷಕ್ಕೂ ಸಂಬಂಧಪಟ್ಟಿದ್ದಲ್ಲ. ಮಾನ್ಯ ಸದಸ್ಯರಿಗೂ ಕುಂಟಲರೆಡ್ಡಿಯವರಿಗೂ ಇರುವ ಸಂಬಂಧವನ್ನು ಪಕ್ಷಕ್ಕೂ ಬೆರಸಲು ಮಾನ್ಯ ಸದಸ್ಯರು ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಪಿ.ಎನ್. ರೆಡ್ಡಿ.— ಅಲ್ಲಿ ನಡೆದಿರುವ ಘಟನೆಯನ್ನು ನಾನು ಹೇಳುತ್ತಿದ್ದೇನೆ. ಖಂಡಿತ ಅವರು ಅಂದರೆ ಕುಂಟಲರಾರುರೆಡ್ಡಿ ನನಗೆ ನೆಂಟರಲ್ಲ, ನನಗೆ ಯಾರೂ ನೆಂಟರಿಲ್ಲ. ಚಿಕ್ಕವೆಂಕಟಪ್ಪ ದೂರು ಕೊಟ್ಟಿರುವುದನ್ನು ಇಲ್ಲಿ ಹೇಳುತ್ತಿದ್ದೇನೆ, ಅಷ್ಟೆ.

ಅಧ್ಯಕ್ಷರು.— ಮಾನ್ಯ ಮುಖ್ಯ ಮಂತ್ರಿಯವರು ತಮ್ಮ ಪ್ರಸ್ತಾಪಕ್ಕೆ ಉತ್ತರ ಕೊಡುವರು. ತಾವು ದಯವಿಟ್ಟು ಪ್ರಸ್ತಾಪವನ್ನು ಬೇಗ ಮುಗಿಸಿ.

ಪಿ.ಎನ್. ರೆಡ್ಡಿ.—ಮೇಲ್ಕಂಡವರು ರಾಮಯ್ಯನನ್ನು ಕಲ್ಲು ಚೂರುಗಳಿಂದ ಹೊಡೆಯಲು ಪ್ರಯತ್ನಿಸಿದರು ಇದನ್ನು ಪೋಲೀಸರಿಗೆ ಕಂಪ್ಲೆಂಟ್ ಮಾಡಿದರು. ಅವರು ಆ ದಿವಸ ಸಂಜೆ ಸಹಾ ಬಂದು ಹೀನಾಮಾನವಾಗಿ ಬೈದರು, ಮತ್ತು ಚಿಕ್ಕವೆಂಕಟಪ್ಪ ಹಾಗೂ ಅವರ ಕುಟುಂಬದವರಿಗೆ ಜೀವಕ್ಕೆ ಅಪಾಯ ಮಾಡುತ್ತೇನೆ, ತೊಂದರೆ ಕೊಡುತ್ತೇನೆ ಎಂದು ಬಯ್ದಿದ್ದಾರೆ. ಅವರ ಮೇಲೆ ಸರ್ಕಾರದವರು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅವರು ಬಹಳ ಭಯಗ್ರಸ್ತರಾಗಿದ್ದಾರೆ. ಆ ವ್ಯಕ್ತಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳು ರಕ್ಷಣೆ ಕೊಡಬೇಕು. ಜೊತೆಗೆ ಅವರು ಯಾವ ಪಾರ್ಟಿಯವರೇ ಇರಲಿ ಅವರಿಗೆ ರಕ್ಷಣೆ ಕೊಡಬೇಕು. ಶ್ರೀಮಾನ್ ರಾಜಶೇಖರನ್ ಅವರು ಆ ವ್ಯಕ್ತಿ ಕುಂಟಲರೆಡ್ಡಿ ನನ್ನ ಬಂಧುಗಳು ಎಂದು ಹೇಳಿದರು. ಅವರೂ ನನ್ನ ಬಂಧುಗಳಲ್ಲ, ಇವರೂ ನನ್ನ ಬಂಧುಗಳಲ್ಲ ಆದರೆ ಸಮಾಜದ ಸುಧಾರಣೆಯಲ್ಲಿ ಎಲ್ಲರೂ ಬಂಧುಗಳೇ ಆನೇಕಲ್ ಕ್ಷೇತ್ರದ ಶಾಸಕರಿಗೂ ಕೂಡ ಇದರ ಒಂದು ಕಾಪಿಯನ್ನು ಕೊಟ್ಟಿದ್ದೇವೆ ಎಂದು ಅವರು ಹೇಳಿದ್ದಾರೆ. ನನಗೂ ಅದರ ಒಂದು ಕಾಪಿಯನ್ನು ಕೊಟ್ಟಿದ್ದಾರೆ. ನಾನು ಬೇರೆ ಶಾಸಕರ ಕ್ಷೇತ್ರದಲ್ಲಿ ಇಂಟರ್‌ಫಿಯರ್ ಮಾಡುವುದಕ್ಕೆ ಹೋಗುವುದಿಲ್ಲ. ಆನೇಕಲ್ ಕ್ಷೇತ್ರದ ಶಾಸಕರಿಗೆ ಆ ಕಂಪ್ಲೆಂಟಿನ ಒಂದು ಕಾಪಿಯನ್ನು ಕೊಟ್ಟರೂ ಕೂಡ ಅವರು ಇದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದು ಹೇಳಿದರು. ಬೆಂಗಳೂರು ಪೋಲೀಸ್ ಸೂಪರಿಂಟೆಂಡೆಂಟರಿಗೂ ಒಂದು ಕಾಪಿಯನ್ನು ಕಳುಹಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟವರಿಗೆ ಸೂಕ್ತ ರಕ್ಷಣೆಯನ್ನು ಕೊಡಬೇಕು. ಮತ್ತು ತಪ್ಪಿತಸ್ಥರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು ಎಂದು ಕೇಳಿಬಯಸುತ್ತೇನೆ.

ಶ್ರೀ ಪೈ. ರಾಮಕೃಷ್ಣ.— ಇದನ್ನು ಪಕ್ಷಾತೀತವಾಗಿ ನೋಡಬೇಕು, ಮಾನ್ಯ ಸದಸ್ಯರು ಸುಮ್ಮನೆ ಜನತಾಪಾರ್ಟಿಯನ್ನು ಬಯಲಿಗೆ ಎಳೆದರು.

ಶ್ರೀ ಎಸ್. ಎಸ್. ಆರಕೇರಿ.—ನಾನು ರೂಲ್ ೩೧೨ ಪ್ರಕಾರ ನೋಟಿಸ್ ಕಳುಹಿಸಿದ ಉದ್ದೇಶ ಏನು ಎಂದರೆ ಹರಿಜನ ರಾಮಯ್ಯನ ಮೇಲೆ ನಾಳೆ ಅಟ್ರಾಸಿಟಿ ನಡೆಯಬಾರದು, ಅವನಿಗೆ ಸರಿಯಾದ ಒಂದು ರಕ್ಷಣೆ ದೊರೆಯಬೇಕು ಎನ್ನುವ ಉದ್ದೇಶದಿಂದ ನಾನು ಇದನ್ನು ತಂದಿದ್ದೇನೆ. ಇದಕ್ಕೆ ಮಾನ್ಯ ಮಿತ್ರರು ಒಂದೆ ಪಕ್ಷದ ಸ್ವರೂಪವನ್ನು ಕೊಟ್ಟು ಈ ವಿಷಯವನ್ನು ಬೇರೆ ರೀತಿ ಡೈವರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡಿ ಜನತಾ ಪಾರ್ಟಿಯಮೇಲೆ ಆಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಯಾರೇ ತಪ್ಪು ಮಾಡಿದ್ದರೂ ಕೂಡ ಇದನ್ನು ಪಕ್ಷಾತೀತವಾಗಿ ನೋಡಬೇಕು. ಇಲ್ಲಿ ಹರಿಜನರ ಮೇಲೆ ಹಲ್ಲೆ ನಡೆದಿರುವುದು ಖಂಡನಾತೀತವಾದುದು ಎಂದು ನಾನು ಹೇಳಬಯಸುತ್ತೇನೆ.

† ಶ್ರೀ ಡಿ. ದೇವರಾಜ ಆರಸ್.— ಪಕ್ಷದ ಮೇಲೇ ಆಪಾದನೆ ಮಾಡುವುದು ಇಲ್ಲದೆ ಇರುವ ಕಡೆ ಮಾಡುವುದು ಬೇಡ. ಆದು ಇದ್ದ ಕಡೆ ಮಾಡಿದ್ದಾರೆ ಅದನ್ನು ಯೋಚನೆ ಮಾಡೋಣ. ಈಗ ಮಾನ್ಯ ಸದಸ್ಯರಿಗೆ ಗಂಟು ಬೇಕು, ನಂಟು ಬೇಕು ಎಂದು ಹೇಳಿದರೆ ಆದು ಕಷ್ಟವಾಗುತ್ತದೆ. ಹರಿಜನರಿಗೆ ರಕ್ಷಣೆ ಬೇಕು ಎಂದರೆ ಅವರು ಯಾವ ಪಕ್ಷದವರೇ ಇರಲಿ ಜನತಾ ಪಕ್ಷದವರು ಇರಲಿ, ಕಾಂಗ್ರೆಸ್ ಪಕ್ಷದವರು ಇರಲಿ ಅಥವಾ ಕಮ್ಯುನಿಸ್ಟ್ ಪಕ್ಷದವರೇ ಇರಲಿ. ಪಕ್ಷದ ಆಧಾರದ ಮೇಲೆ ನಡೆದರೆ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಹರಿಜನರಿಗೆ ರಕ್ಷಣೆ ಬೇಡ ಪಕ್ಷವನ್ನು ನೋಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ.

One Chickkavenkatappa, S/o. Muniyappa, Harijan lodged a complaint in Anekal Police Station on 19-7-1978 that when he and his brother Ramaiah were putting a stone fensing in their Gramathna land, one Mariyappa Setty, his son Umesh, Madappa Shetty, Raja and others obstructed them and started destroying th fence. When the complainant and his brother tried to prevent this; Mariyappa Setty assaulted the complainant's brother Ramaiah with an iron crow bar on the rear side of his head. The accused also assaulted the complainant and his brother with their hands. The complainant sustained body pain and there was a swelling near the neck of his brother. His brother was admitted at Jigani Hospital. The complainant told that there is no need for medical treatment to him.

A case in Anekal Police Station Crime No: 110/78 under Section 324 IPC was registered by the Station House Officer who visited the spot, conducted a mahajar and examined three eye witnesses, viz, Channalappa, Chinnappa, and Abbaiah (all Harijans). The Hospital accident Register showed that injuries were simple in nature and might take about two weeks to heal in the absence of any complications. Investigation disclosed that the land in No. 229 belong to Kunta Reddy who sold it to Chikkavenkatappa for Rs. 1000/ on 5-12-1977. Three accused were arrested on 24-7-1978 and two accused on 25-7-1978.

Now the case has been charge-sheeted to-day and all the 5 accused have been arrested and therefore when the charge-sheet has been filed. I don't think we can proceed to discuss anything further in the matter. Therefore, it becomes sub-judice.

Regarding giving protection to Harijans, I would like to say something. Here, it is in the nature of the quarrel regarding the land but what I want to submit here is, the Government is taking extra-precautionary measures to deal with such cases, particularly when it affects the Harijans with all seriousness. Even before this matter was brought to my notice I have already given instructions to deal with it without fear or favour, not to be influenced by any party, may be Janatha Party, may be Congress, or may be local, may be this ; may be that. So, Sir, let them not have any doubt regarding the intention of the Government to deal with this case or any other case very sternly. I am aware Sir, by my experience that in Bangalore District, especially in two-three taluks, the Harijans are subjected to these threats, intimidation and even violance and some times they have been beaten with sharp weapons, not now but in many previous cases and I have given instructions from the Police Department to give some special care and attention to these areas where the Harijans are being very often badly treated like this.

SRI S. S. ARAKERI.— May I know whether the provisions of the Untouchability Abolition Act has been brought while filing the charge-sheet ?

SRI D. DEVARAJ URS.— That I don't know. As a Lawyer, he should know ; This, comes under the Criminal procedure Code.

SRI S. S. ARAKERI.— In addition to it....

SRI D. DEVARAJ URS.— In addition, how can it be? I don't know because Untouchability Act is meant for something else. Here, it is in the nature of a quarrel or dispute over a land. A Harijan is said to be assaulted and those people seem to have obstructed him from his lawful position and enjoyment of the land. Perhaps, as a Lawyer, if the hon. Member were to tell me something. I shall ask them to examine it. That is all.

ಶ್ರೀ ಯು. ಬಿ. ಬೋರ್ಕರ್.— ರಾಮಯ್ಯನು ಕೂಲಿ ಮಾಡಿ ಆ ಹಣದಲ್ಲಿ ಮನೆಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದ. ಈಗ ಅವನಿಗೆ ಮೈತುಂಬ ಏಟು ಬಿದ್ದು ಅವನು ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ತೆಗೆದುಕೊಳ್ಳುತ್ತಿದ್ದಾನೆ. ಆದ್ದರಿಂದ ಅವನ ಜೀವನೋಪಾಯಕ್ಕೆ ಅವಕಾಶ ಮಾಡುವುದಕ್ಕಾಗಿ ೩೦೦-೪೦೦ ರೂಪಾಯಿಗಳ ರಿಲೀಫನ್ನು ಅವನಿಗೆ ಸರ್ಕಾರದವರು ಕೊಡುತ್ತಾರೆಯೇ ?

SRI D. DEVARAJ URS.— I cannot promise anything.